ಯಾವುದೇ ಅನುದಾನ ನೀಡಿರುವುದಿಲ್ಲ ಸದರಿ ಯೋಜನೆಯಿಂದ ಅನುಕೂಲ ಪಡೆಯುವ ಜಮೀನಿನ ವಿಸ್ತೀರ್ಣ 300 ಎಕರೆಗಳು

ಇ) ಪ್ರಸಕ್ತ ಸಾಲಿಗೆ ಯಾವುದೇ ಏತ ನೀರಾವರಿ ಯೋಜನೆಗಳ ಪ್ರಸ್ತಾವನೆಗಳು ಇರುವುದಿಲ್ಲ

ಧಾರವಾಡ ಜಿಲ್ಲೆಯಲ್ಲಿ ಹೊಸ ಬಸ್ ಡಿಪೋ ಪ್ರಾರಂಭಿಸುವ ಬಗ್ಗೆ

25 (193) ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ, (ಕಲ್ಗುಟಗಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಸಾರಿಗೆ ಸಂಸ್ಥೆಯ ಡಿಪೋಗಳ ಸಂಖ್ಯೆ ಎಷ್ಟು ಎಲ್ಲೆಲ್ಲಿ ಅಸ್ತಿತ್ವದಲ್ಲಿವೆ

ಆ) ಜಿಲ್ಲೆಯಲ್ಲಿ ನೂತನವಾಗಿ ಬಸ್ ಘಟಕಗಳನ್ನು ಸ್ಥಾಪಿಸಲು ಸಾರಿಗೆ ಇಲಾಖೆ ನಿರ್ಧರಿಸಿದೆಯೇ ಎಲ್ಲೆಲ್ಲಿ ಸ್ಥಳ ಗುರುತಿಸಲಾಗಿದೆ

ಇ) ಕಲಘಟಗಿಯಲ್ಲಿ ಬಸ್ ಡಿಪೋ ಸ್ಥಾಪಿಸುವ ಪ್ರಸ್ತಾವ ಸಂಸ್ಥೆಯ ಮುಂದಿದೆಯೇ ಈಗಾಗಲೇ ಮಂಜೂರಾತಿ ಆಗಿದೆಯೇ

ಈ) ಮಂಜೂರಾತಿ ಆಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುತ್ತದೆ ವಿಳಂಭಕ್ಕೆ ಕಾರಣಗಳೇನು?

ಶ್ರೀ ಬಿ ರಮಾನಾಥ್ ರೈ (ಸಾರಿಗೆ ಸಚಿವರು)

ಅ) ಒಟ್ಟು 05

1) ಹುಬ್ಬಳ್ಳಿ ನಗರ ಸಾರಿಗೆ –1

2) ಹುಬ್ಬಳ್ಳಿ ನಗರ ಸಾರಿಗೆ–2

3) ಹುಬ್ಬಳ್ಳಿ ಗ್ರಾಮಾಂತರ ಘಟಕ – 1

4) ಹುಬ್ಬಳ್ಳಿ ಗ್ರಾಮಾಂತರ ಘಟಕ – 2

ಹಾಗೂ 5) ಧಾರವಾಡ ಘಟಕ

ಆ) ಹೌದು

1) ನವಲಗುಂದ (2) ಕಲಘಟಗಿ ಮತ್ತು (3) ಕುಂದಗೋಳ

ಇ) ಹೌದು 2002–03ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಲಾಗಿದೆ

ಈ) ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು ಅದು ಪೂರ್ಣಗೊಂಡ ನಂತರ ಆಂತರಿಕ ಬಂಡವಾಳನ್ನಾದರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು

ಚಿಂತಾಮಣಿ ಕ್ಷೇತ್ರದ ವೆಂಕಟಾಪುರ ದೊಡ್ಡಕೆರೆ ದುರಸ್ಥಿ ಮಾಡುವ ಬಗ್ಗೆ

27 (112) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಚೇಳೂರು ಹೋಬಳಿ ಬಾಗೇಪಲ್ಲಿ ತಾಲ್ಲೂಕು ವೆಂಕಟಾಪುರ ದೊಡ್ಡಕೆರೆ ನಾದುರಸ್ತಿಯಾಗಿ ಕೆಲವು ತಿಂಗಳುಗಳ ಹಿಂದೆ ಬಿದ್ದ ಮಳೆಗೆ ಕೆರೆಕಟ್ಟೆ ಒಡೆದು ಹೋಗಿ ನೀರು ರೈತರ ಬೆಳೆಗಳ ಮೇಲೆ ಹರಿದು ರೈತರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ವೆಂಕಟಾಪುರ ಕೆರೆ ದೊಡ್ಡದಾಗಿ ಇದ್ದು ನೀರಿನ ಶೇಖರಣೆಯೂ ಜಾಸ್ತಿ ಇದ್ದು ಆ ಕೆರೆಯ ಕಟ್ಟೆಯನ್ನು ಚೆನ್ನಾಗಿ ಅಗಲ ಮಾಡಿ ದುರಸ್ತಿ ಮಾಡದೆ ಇರುವುದರಿಂದ ಈ ತೊಂದರ ತಪ್ಪುವುದಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ, ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದರ ಕುರಿತು ಏನು ಕ್ರಮ ಜರುಗಿಸಿದೆ ಎಂಬುದನ್ನು ತಿಳಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ವೆಂಕಟಾಪುರ ದೊಡ್ಡಕೆರೆಯು ನಾದುರಸ್ತಿಯಾಗಿರುವು ನಿಜವಾದರೂ ಕೆಲವು ದಿನಗಳ ಹಿಂದೆ ಬಿದ್ದ ಮಳೆಗೆ ಕೆರೆಕಟ್ಟೆ ಒಡೆದು ಹೋಗಿರುವುದಿಲ್ಲ ಆದುದರಿಂದ ರೈತರ ಬೆಳೆಯ ಮೇಲೆ ನೀರು ಹರಿದು ಯಾವುದೇ ನಷ್ಟ ಸಂಭವಿಸಿರುವುದಿಲ್ಲ

ಆ) ಹೌದು

ಇ) ದಿನಾಂಕ 29 09 2003 ಹಾಗೂ 30 09 2003 ರಂದು ಬಿದ್ದ ಭಾರಿ ಮಳೆಯಿಂದಾಗಿ ಈ ಕೆರೆಯು ತುಂಬಿ ಕೋಡಿ ಹರಿದಿದ್ದು ಹಾಗೂ ಬಹಳ ವರ್ಷಗಳಿಂದ ಈ ಕೆರೆಗೆ ನೀರು ಬಾರದೇ ಕೆರೆ ತುಂಬದ ಕಾರಣ ಏರಿಯಲ್ಲಿ ಕೆಲವು ಸಣ್ಣಪುಟ್ಟ ರಂಧ್ರಗಳು ಏರ್ಪಟ್ಟಿದ್ದು ಈ ರಂಧ್ರಗಳಲ್ಲಿ ನೀರು ಹರಿದು ರಂಧ್ರಗಳು ದೊಡ್ಡದಾಗಿ ಸೋರುವಿಕೆ ಕಂಡು ಬಂದಿರುತ್ತದೆ ತಾತ್ಕಲಿಕವಾಗಿ ತಡೆ ಏರಿಯನ್ನು ನಿರ್ಮಿಸಿ ಈ ಸೋರುವಿಕೆಯನ್ನು ತಡೆದಿದ್ದು ಈಗ ಈ ಕೆರೆಗೆ ಯಾವುದೇ ಅಪಾಯವಿರುವುದಿಲ್ಲ ಈಗ ಕೆರೆಯಲ್ಲಿ ನೀರು ಇರುವುದರಿಂದ ಶಾಶ್ವತವಾಗಿ ದುರಸ್ತಿಯನ್ನು ನೀರಿನ ಮಟ್ಟ ಇಳಿದ ನಂತರ ಪರಿಶೀಲಿಸಲಾಗುವುದು

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಬಗ್ಗೆ

28 (173) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ನಾಗರೀಕರಿಗೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕ ಬಂದಿದೆಯೇ

ಆ) ಮಲಪ್ರಭಾ ಕುಡಿಯುವ ನೀರಿನ 3ನೇ ಹಂತದ ಯೋಜನೆ ಯಾವ ಹಂತದಲ್ಲಿದೆ

ಇ) ಈ ಯೋಜನೆ ಕೈಗೆತ್ತಿಕೊಳ್ಳಲು ವಿಳಂಬವಾಗುತ್ತಿರುವ ಕಾರಣಗಳೇನು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) ಅವಳಿ ನಗರಕ್ಕ 2 ಮುಖ್ಯ ನೀರಿನ ಮೂಲಗಳಲ್ಲಿ ಒಂದಾದ ನೀರಸಾಗರ ಜಲಾಶಯವು ಸತತ ಮೂರು ವರ್ಷಗಳ ಬರಗಾಲದಿಂದ ಪೂರ್ಣವಾಗಿ ಒತ್ತಿ ಹೋಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಹುಬ್ಬಳ್ಳಿ ಧಾರವಾಡ ನಗರಕ್ಕೆ ಮಲಪ್ರಭಾ ಜಲಾಶಯದಿಂದ ನೀರ ಒದಗಿಸುವ 3ನೇ ಹಂತದ ರೂ 144 00 ಕೋಟಿಗಳ ಯೋಜನೆಯ ಪರಿಶೀಲನೆಯಲ್ಲಿದೆ

ಇ) ಪರೀಶೀಲನೆಯಲ್ಲಿದೆ